ದಿನಾಂಕ 14.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು</u> : ಶ್ರೀ ಎಂ ಐ ಕೆ ವಕೀಲರಿಂದ:

ನಮ್ಮ ಠಾಣೆಯಿಂದ ಘಟನ ಸ್ಥಳಕ್ಕೆ 12 ಕಿ ಮಿೀ ದೂರ ಇದೆ. ಘಟನ ಸ್ಥಳಕ್ಕೆ ಹೋಗುವಾಗ ಮಹಜರಿಗೆ ಬೇಕಾಗುವಂತಹ ಐ ಒ ಕಿಟ್ಟಿ ತೆಗೆದುಕೊಂಡು ಹೋಗಿರುತ್ತೇವೆ. ಘಟನ ಸ್ಥಳಕ್ಕೆ ತಲುಪುವಾಗ ಬೆಳಿಗ್ಗೆ 8.30 ಗಂಟೆಗೆ ಆಗಿರುತ್ತದೆ. ಘಟನ ಸ್ಥಳಕ್ಕೆ ಹೋದಾಗ ಆರೋಪಿಗಳು ಅವರ ಮನೆಯಿಂದ ಓಡಿ ಹೋಗಿರುತ್ತಾರೆ ಅದನ್ನು ನಾನು ನೋಡಿರುತ್ತೇನೆ. ನಾವು ಘಟನ ಸ್ಥಳಕ್ಕೆ ಹೋದಾಗ ಆರೋಪಿಗಳು ಅವರ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ.

ನನಗೆ ಯಾವುದಾದರೂ ಮಾಂಸವನ್ನು ನೋಡಿದರೆ ಅದು ಇಂತಹದೆ ಪ್ರಾಣಿಯದ್ದು ಎಂದು ಹೇಳಲು ಆಗುವುದಿಲ್ಲ. ಮಹಜರಿಗೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಚಾಸಾ-1 ರವರು ಫೋನ್ ಮುಖಾಂತರ ಘಟನ ಸ್ಥಳಕ್ಕೆ ಬರಮಾಡಿಕೊಂಡಿರುತ್ತಾರೆ. ಮಹಜರು ಮಾಡುವಾಗ ಘಟನ ಸ್ಥಳದಲ್ಲಿ ಚಾಸಾ-9 1 ನೇ ಆರೋಪಿಯ ಪತ್ನಿ ಹಾಗೂ ನಮ್ಮ ಸಿಬ್ಬಂದಿಗಳು, ಪಂಚರು ಇರುತ್ತಾರೆ. ತಕ್ಷೀರು ಸ್ಥಳದ ಭಾವಚಿತ್ರವನ್ನು ಚಾಸಾ-6 ರವರು ತೆಗೆದಿರುತ್ತಾರೆ. ಸದ್ರಿ ಭಾವಚಿತ್ರಕ್ಕೆ ಸಂಬಂಧಿಸಿದಂತೆ ಕಲಂ 65 ಬಿ ಪ್ರಮಾಣಪತ್ರ ನೀಡಿರುವ ಬಗ್ಗೆ ನೆನಪಿಲ್ಲ. ತಕ್ಷೀರು ಸ್ಥಳದಲ್ಲಿ ಬೆಳಿಗ್ಗೆ 8.30 ರಿಂದ ಸಂಜೆ 4.30 ಗಂಟೆಯ ವರೆಗೆ ಇದ್ದೇವು.

ಚಾಸಾ-1 ರವರಿಗೆ ಬಾತ್ಮೀದಾರರಿಂದ ಮಾಹಿತಿ ಬಂದಿರುವುದಿಲ್ಲ, ನಾವು ತಕ್ಷೀರು ಸ್ಥಳಕ್ಕೆ ಹೋಗಿರುವುದಿಲ್ಲ, ಸದ್ರಿ ಸ್ಥಳದಲ್ಲಿ ಪಂಚರ ಸಮ್ಮುಖದಲ್ಲಿ ಮಹಜರು ಮಾಡಿರುವುದಿಲ್ಲ, ಭಾವಚಿತ್ರ ತಗೆದಿರುವುದಿಲ್ಲ, ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಮತ್ತು ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯ ಸತ್ಯಕ್ಕೆ ದೂರವಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ